ದಿನಾಂಕ : 11.07.2024
ಅಸಲು ದಾವೆ: 54/2011
ಡಿ.ಡಬ್ಲ್ಯೂ: 3

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲು : ವಾದಿ ಪರ ವಕೀಲರಾದ ಶ್ರೀ ಹೆಚ್.ಪಿ.ಎಸ್ ರವರಿಂದ :</u>**

1992 ರಲ್ಲಿ ವಿಭಾಗ ಆಯಿತು ಎಂದು ನಿಮ್ಮ ತಂದೆ ನಿಮಗೆ ಹೇಳಿರುವುದಾಗಿ ಹೇಳಿದ್ದೀರಿ, ಎಲ್ಲಿ ಈ ವಿಭಾಗದ ಪಂಚಾಯಿ ಎಲ್ಲಿ ಆಯಿತು ಎಂದರೆ ಸಾಕ್ಷಿ ನಮ್ಮ ಮನೆಯಲ್ಲಿಯೇ ಆಯಿತು ಎಂದು ಉತ್ತರಿಸುತ್ತಾರೆ. ಸದರಿ ವಿಭಾಗದ ಪಂಚಾಯಿತಿಯಲ್ಲಿ ಬಿ.ಶಿವಣ್ಣಗೌಡ, ಮುನಿಗೌಡ, ಮೊಳ್ಳೆಬೋರಯ್ಯ, ಚಿಕ್ಕಮಾಯಿಗೌಡ ರವರ ಸೇರಿದ್ದರು. ಈ ವಿಭಾಗದ ಪಂಚಾಯಿತಿಯ ಬಗ್ಗೆ ನಾನು ಬಿ.ಶಿವಣ್ಣಗೌಡರವರಿಂದ ಸಹಾ ಕೇಳಿ ತಿಳಿದುಕೊಂಡಿರುತ್ತೇನೆ. ಸದರಿ ವಿಭಾಗದಲ್ಲಿ ಯಾವ ಯಾವ ಆಸ್ತಿ ಯಾರ ಯಾರಿಗೆ ಹಂಚಿಕಯಾಗಿರುತ್ತದೆ ಎಂದರೆ ಸಾಕ್ಷಿ ಸರ್ವೆ ನಂ.36/1ಎ ಪುಟ್ಟಸ್ವಾಮಿ ರವರಿಗೆ, ಸರ್ವೆ ನಂ.36/1ಬಿ ಮನು ಬ್ರಹ್ಮಚಾರಿಯವರಿಗೆ ಹಾಗೂ ಖುಷ್ಕಿ ಹೊಲ ಸರ್ವೆ ನಂ.65 ರಲ್ಲಿ ಪೂರ್ವಕ್ಕೆ ಪುಟ್ಟಸ್ವಾಮಿರವರಿಗೆ, ಪಶ್ಚಿಮಕ್ಕೆ 11 ಗುಂಟೆ ಮನು ಬ್ರಹ್ಮಚಾರಿಯವರಿಗೆ, ಮನೆ ಖಾತೆ ನಂಬರ್ ನೆನಪಿಲ್ಲ ಇದರಲ್ಲಿ ಪೂರ್ವಕ್ಕೆ ಅರ್ಧ ಮನೆ ಪುಟ್ಟಸ್ವಾಮಿರವರಿಗೆ, ಮಧ್ಯದ ಅರ್ಧ ಮನೆ ಮನು ಬ್ರಹ್ಮಚಾರಿಯವರಿಗೆ, ಪಶ್ಚಿಮದ ಒಕ್ಕೊರಲು ನಂಜಾಚಾರಿ ಮತ್ತು ಅವರ ಮಡದಿ ಗೌರಮ್ಮರವರಿಗೆ ಹಂಚಿಕೆಯಾಗಿರುತ್ತದೆ. ಈ ಬಗ್ಗೆ ಏನಾದರೂ ದಾಖಲಾತಿ ಬರೆಯಲಾಯಿತಾ ಎಂದರೆ ಸಾಕ್ಷಿ ಇಲ್ಲ ಪಂಚಾಯಿತಿ ಮಾತ್ರ ಆಯಿತು ಎಂದು ಉತ್ತರಿಸುತ್ತಾರೆ. ಭಾಗ ಆದಾಗ ಆ ದಿನ ಜಮೀನು ಬಳಿ ಹೋಗಿ ಅಳತೆ ಏನಾದರೂ ಮಾಡಲಾಯಿತಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಈಗ ತೋರಿಸಿದ ನಿಪಿ2 ಆರ್.ಟಿ.ಸಿ 2011-12 ರ ಸಾಲಿನ ಆರ್.ಟಿ.ಸಿ ಯಾಗಿದ್ದು ಅದರಲ್ಲಿ ಸರ್ವೆ ನಂ.65/1ಎ1 ಈಗಲೂ ಯಾರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ನನ್ನ ತಾತ ನಂಜಾಚಾರಿಯವರ ಹೆಸರಿನಲ್ಲಿ ಇದೆ ಎಂದು ಉತ್ತರಿಸುತ್ತಾರೆ. ನಿಮ್ಮ ಪ್ರಕಾರ ವಿಭಾಗದಲ್ಲಿ ಈ ಸರ್ವೆ ನಂಬರ್ ನಲ್ಲಿ ಜಮೀನು ಯಾರು ಯಾರಿಗೆ ಹಂಚಿಕೆಯಾಗಿತ್ತು ಎಂದರೆ ಸಾಕ್ಷಿ ಪೂರ್ವದಲ್ಲಿ ಪುಟ್ಟಸ್ವಾಮಿರವರಿಗೆ 11 ಗುಂಟೆ,

ಪಶ್ಚಿಮಕ್ಕೆ 11 ಗುಂಟೆ ಮನು ಬ್ರಹ್ಮಚಾರಿಯವರಿಗೆ ಹಂಚಿಕಯಾಗಿರುತ್ತದೆ ಎಂದು ಉತ್ತರಿಸುತ್ತಾರೆ. ಉಳಿದ ಜಮೀನು ಯಾರಿಗೆ ಹಂಚಿಕೆಯಾಗಿದೆ ಎಂದರೆ ಸಾಕ್ಷಿ ಒಟ್ಟು 1 ಎಕರೆ 15 ಗುಂಟೆಯಲ್ಲಿ 12 ಗುಂಟೆ ಪುಟ್ಟಸ್ವಾಮಿರವರ ಸ್ವಾಧೀನದಲ್ಲಿ ಇದೆ, 11 ಗುಂಟೆ ಮನು ಬ್ರಹ್ಮಚಾರಿಯವವರ ಸ್ವಾಧೀನದಲ್ಲಿ ಇದೆ, ಉಳಿದ ಜಮೀನು ಬೇರೆಯವರದು, ಅದು ನನ್ನ ತಾತನ ಹೆಸರಿನಲ್ಲಿಯೇ ಬರುತ್ತಿದೆ ಎಂದು ಉತ್ತರಿಸುತ್ತಾರೆ. ನಿಮ್ಮ ತಾತನ ಹೆಸರಿನಲ್ಲಿ 3 ನೇ ವ್ಯಕ್ತಿಯ ಆಸ್ತಿಯೂ ಬರುತ್ತಿದೆ ಎಂದು ಹೇಳುತ್ತಿದ್ದೀರಿ, ನೀವೇನಾದರೂ ಆ ವ್ಯಕ್ತಿಗೆ ನಿಮ್ಮ ಹೆಸರಿಗೆ ಮಾಡಿಸಿಕೊಳ್ಳಿ ಎಂದು ಕೇಳಿದ್ದೀರಾ ಎಂದರೆ ಸಾಕ್ಷಿ ನಾವು ಕೇಳಿಲ್ಲ ಎಂದು ಉತ್ತರಿಸುತ್ತಾರೆ.

ಸರ್ವೆ ನಂ.65/1 ಎ 1 ನಿಮ್ಮ ತಂದೆ ಮತ್ತು ಚಿಕ್ಕಪ್ಪನ ನಡುವೆ ವಿಭಾಗ ಆಗಿದೆ ಎಂದು ಹೇಳುತ್ತಿದ್ದೀರಿ, ಅದರಂತೆ ನಿಮ್ಮ ತಂದೆ ಹಾಗೂ ಚಿಕ್ಕಪ್ಪನ ಹೆಸರಿಗೆ ಖಾತೆ ಆಗಿದೆಯಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನೀವು ಕಳೆದ 7 ವರ್ಷಗಳಿಂದ ವ್ಯವಹಾರ ಮಾಡುತ್ತಿರುವುದಾಗಿ ಹೇಳಿದ್ದೀರಿ, ನಿಮ್ಮ ತಂದೆ ತೀರಿಕೊಂಡ ನಂತರವಾದರೂ ಸದರಿ ಸರ್ವೆ ನಂಬರ್ ಜಮೀನು ವಿಭಾಗ ಆಗಿದೆ ಅದರಂತೆ ನಮ್ಮ ತಂದೆಯ ಹೆಸರಿಗೆ ಆಗಲಿ ಅಥವಾ ನನ್ನ ಹೆಸರಿಗೆ ಆಗಲಿ ಖಾತೆ ಮಾಡಿಕೊಡಿ ಎಂದು ಅರ್ಜಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ನ್ಯಾಯಾಲಯದಲ್ಲಿ ವ್ಯಾಜ್ಯ ನಡೆಯುತ್ತಿರುವ ಕಾರಣ ಯಾವುದೇ ಅರ್ಜಿ ಕೊಟ್ಟಿಲ್ಲ ಎಂದು ಉತ್ತರಿಸುತ್ತಾರೆ. ಈ ವ್ಯಾಜ್ಯ 1993 ನೇ ಇಸವಿಯಿಂದಲೂ ನಡೆಯುತ್ತಿದೆ ಎಂದರೆ ಸರಿ. ಸರ್ವೆ ನಂ.65/1 ಎ 1 ರಲ್ಲಿ ನಿಮ್ಮ ತಾತ ನಂಜಾಚಾರಿಯವರ ಭಾಗಕ್ಕೆ ಯಾವುದಾದರೂ ಹಿಸ್ಸೆ ಹೋಗಿತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. MR 23/1992-93 ರ ಖಾತೆ ಬದಲಾವಣೆಯಲ್ಲಿ ಸರ್ವೆ ನಂಬರ್ 65 ಜಮೀನು ಸೇರಿತ್ತಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಆ ವಿಭಾಗದಲ್ಲಿ ನಿಮ್ಮ ಅಜ್ಜಿ ಗೌರಮ್ಮನಾಗಲಿ, ನಿಮ್ಮ ತಂದೆಯ ಸಹೋದರಿಯರಾಗಿಲಿ ಸೇರಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಆ ವಿಭಾಗದಲ್ಲಿ ನಿಮ್ಮ ತಾತನಿಗಗಾಲಿ, ಅಜ್ಜಿಗಾಗಲಿ, ನಿಮ್ಮ ತಂದೆಯ ಸಹೋದರಿಯರಿಗಾಗಲಿ ಭಾಗ ಗುರುತಿಸಲಾಯಿತಾ ಎಂದರೆ ಸಾಕ್ಷಿ ಅಜ್ಜಿ ಮತ್ತು ತಾತನಿಗೆ ಮನೆಯ ಒಕ್ಕೊರಲಿನಲ್ಲಿ ಮಾತ್ರ ಗುರುತಿಸಲಾಯಿತು, ಅವರ ಬಳಿ ಹಣ ಇತ್ಯಾದಿ ಇದ್ದುದರಿಂದ ಬೇರೆ ಭಾಗ ಬೇಡ ಎಂದು ಅವರೇ ಕುಳಿತು ಭಾಗ ಮಾಡಿಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ.

1992 ನೇ ಇಸವಿಯಲ್ಲಿ ನಿಮ್ಮ ತಂದೆಯ ಸಹೋದರಿಯರಲ್ಲಿ ಕೆಲವರಿಗೆ ಮದುವೆಯಾಗಿರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ, ನನಗೆ ತಿಳಿದು ಹಾಗೆ ಎಲ್ಲರಿಗೂ ಮದುವೆಯಾಗಿ ಅವರ ಗಂಡನ ಮನೆಯಲ್ಲಿ ಇದ್ದಾರೆ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆಯ ಸಹೋದರಿಯರಿಗೆ ಆಸ್ತಿಗಳನ್ನು ಇತ್ಯರ್ಥ ಮಾಡಿದರಾ ಎಂದರೆ ಸಾಕ್ಷಿ ಹೆಣ್ಣು ಮಕ್ಕಳಿಗೆ ಭಾಗ ಇತ್ಯರ್ಥ ಮಾಡಲಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಾತ ಮತ್ತು ಅಜ್ಜಿಯನ್ನು ನಿಮ್ಮ ಚಿಕ್ಕಪ್ಪನವರು ನೋಡಿಕೊಳ್ಳಲು ಹೆಚ್ಚುವರಿಯಾಗಿ ಅವರಿಗೆ ಆಸ್ತಿ ಕೊಡಲಾಗಿತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. MR 23/1992-93 ಅನ್ನು ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿದ್ದೇನೆ ಎಂದು ಉತ್ತರಿಸುತ್ತಾರೆ. ಸದರಿ ದಾಖಲಾತಿಯನ್ನು ಕಚೇರಿಯಿಂದ ತೆಗೆಸಿ ನೋಡಿರುತ್ತೇನೆ. ನಕಲನ್ನು ನಾನು ಪಡೆದುಕೊಂಡಿರುತ್ತೇನೆ. ಸದರಿ ದಾಖಲಾತಿಯ ನಕಲನ್ನು ನನ್ನ ತಂದೆಯೂ ತೆಗೆದುಕೊಂಡಿದ್ದರು, ನಾನು 6 ತಿಂಗಳ ಹಿಂದೆ ತೆಗೆದುಕೊಂಡಿರುತ್ತೇನೆ. ನೀವು ಹಾಜರು ಪಡಿಸಿರುವ ದಾಖಲಾತಿಗಳಲ್ಲಿ MR 23/1992-93 ಅನ್ನು ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ದಾಖಲಾತಿಗಳನ್ನು ಪರಿಶೀಲಿಸಿ ನೋಡಿ ಕಾಲಾವಕಾಶ ಕೊಟ್ಟರೆ ಹಾಜರು ಪಡಿಸುತ್ತೇನೆ ಎಂದು ಉತ್ತರಿಸುತ್ತಾರೆ. ಸದರಿ ದಾಖಲಾತಿಯನ್ನು ಹಾಜರು ಪಡಿಸಲು ತೊಂದರೆ ಏನು ಇರುವುದಿಲ್ಲ.

ನಿಡಿ.9 ರಿಂದ 12 ಹಾಗೂ 13 ರಿಂದ 20 ದಾಖಲಾತಿಗಳು ಒಂದೇ ದಾಖಲಾತಿಗಳು ಎಂದರೆ ಸಾಕ್ಷಿ ಹೌದು by over sight ಹಾಜರು ಪಡಿಸಿದ್ದೇನೆ ಎಂದು ಉತ್ತರಿಸುತ್ತಾರೆ. ನೀವು ಹಾಜರು ಪಡಿಸಿರುವ ನಿಡಿ.23 ಪಟ್ಟಾ ಪುಸ್ತಕದಲ್ಲಿ ನೀವು ಕಂದಾಯ ಪಾವತಿ ಮಾಡಿದ ಬಾಬ್ತು ದಿನಾಂಕ ಎಂಟ್ರಿ ಇಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಾನು ಹಾಜರು ಪಡಿಸಿರುವ ನಿಡಿ.21 ಮತ್ತು 22 ಕಂದಾಯ ಪಾವತಿ ರಶೀದಿಗಳು ಈ ದಾವೆ ದಾಖಲಾದ ನಂತರ 2018 ನೇ ಇಸವಿಯಲ್ಲಿ ಪಾವತಿಸಿರುವ ರಶೀದಿಗಳು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನೀವು ಹಾಜರು ಪಡಿಸಿರುವ ನಿಡಿ.9 ರಿಂದ 12 ಹಾಗೂ 13 ರಿಂದ 20 ದಾಖಲಾತಿಗಳು ಈ ದಾವೆ ದಾಖಲಾದ ನಂತರದ ದಾಖಲಾತಿಗಳು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನಿಡಿ.9 ರಿಂದ ನಿಡಿ.20 ದಾಖಲಾತಿಗಳನ್ನು ನೀವು ಈ ಕೇಸ್ ಆದ ನಂತರದಲ್ಲಿ ಸಾಧ್ಯವಾದರೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಸಷ್ಟಿ ಮಾಡಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ.

ನಿಡಿ.9 ರಿಂದ 12 ದಾಖಲಾತಿಗಳು ನಮ್ಮ ತಂದೆಯಿಂದ ನಮ್ಮ ತಾಯಿ ಹೆಸರಿಗೆ ಪೌತಿ ಖಾತೆ ಆದ ದಾಖಲಾತಿಗಳು ಆಗಿರುತ್ತವೆ. ಈ ರೀತಿ ದಾಖಲಾತಿಗಳನ್ನು ಬದಲಾವಣೆ ಮಾಡಿಸಿಕೊಳ್ಳಲು ನ್ಯಾಯಾಲಯದಲ್ಲಿ ವ್ಯಾಜ್ಯ ಇರುವ ಕಾರಣ ಸಂಬಂಧಪಟ್ಟ ನ್ಯಾಯಾಲಯದಿಂದ ಅನುಮತಿ ಪಡೆದಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಆ ರೀತಿ ದಾಖಲಾತಿಗಳನ್ನು ಬದಲಾವಣೆ ಮಾಡಿಸಿಕೊಳ್ಳುವಾಗ ಈ ದಾವೆಯ ಪಕ್ಷಗಾರರಿಗೆ ನೋಟೀಸ್ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಈ ದಾಖಲಾತಿಗಳನ್ನು ವಾದಿಯರಿಗೆ ತೊಂದರೆ ಆಗಲಿ ಎಂದು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

MR 23/1992-93 ನೋಡಿರುವುದಾಗಿ ಹೇಳಿದ್ದೀರಿ, ಅದರಲ್ಲಿ ವಿಭಾಗದ ಬಗ್ಗೆ ಪ್ರಸ್ತಾವನೆ ಏನಾದರೂ ಇದೆಯಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಎಂ.ಆರ್. ಅನ್ನೂ ಸಹಾ ನಿಮ್ಮ ತಂದೆ ಬದುಕಿದ್ದಾಗ ಸಾಧ್ಯವಾದರೆ ವಾದಿಯರಿಗೆ ತೊಂದರೆಯಾಗಲಿ ಎಂಬ ಉದ್ದೇಶದಿಂದ ಸೃಷ್ಟಿ ಮಾಡಿರುವುದು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಸದರಿ ದಾಖಲಾತಿ ಮೋಸದಿಂದ ಸೃಷ್ಟಿ ಮಾಡಿರುವ ದಾಖಲಾತಿ ಆಗಿರುವ ಕಾರಣದಿಂದಲೇ ಯಾವುದೇ ವ್ಯಾಜ್ಯದಲ್ಲಿ ನಿಮ್ಮ ತಂದೆಯಾಗಲಿ, ನೀವಾಗಲಿ ಅದನ್ನು ನ್ಯಾಯಾಲಯಕ್ಕೆ ಹಾಜರ ಪಡಿಸಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನೀವು ಹೇಳುವ ಪ್ರಕಾರ 1992 ನೇ ಇಸವಿಯಲ್ಲಿ ಯಾವುದೇ ಬಾಯಿ ಮಾತಿನ ಮೂಲಕ ವಿಭಾಗ ಆಗಿಲ್ಲ ಎಂದರೆ ಸಾಕ್ಷಿ ಆಗಿದೆ ಎಂದು ಉತ್ತರಿಸುತ್ತಾರೆ. ನೀವು ಹೇಳುವ ರೀತಿ 1992 ರ ವಿಭಾಗ ಆಗಿದ್ದರೂ ಅಥವಾ ಆಗದೆ ಇದ್ದರೂ ವಾದಿಯರ ಹಕ್ಕನ್ನು ಬದ್ದಪಡಿಸುವುದಿಲ್ಲ ಎಂದರೆ ಸಾಕ್ಷಿ ನಮ್ಮ ತಂದೆ ಸಂಪಾದಿಸಿರುವ ಆಸ್ತಿಯಾಗಿರುವುದರಿಂದ ಅದರಲ್ಲಿ ವಾದಿಯರಿಗೆ ಹಕ್ಕಿಲ್ಲ ಎಂದು ಉತ್ತರಿಸುತ್ತಾರೆ. MR23/1992-93 ನೈಜವಾದ ದಾಖಲಾತಿ ಅಲ್ಲ ಅದು ಜಾರಿಗೂ ಬಂದಿಲ್ಲ ಎಂದರೆ ಸಾಕ್ಷಿ ಸತ್ಯವಾದ ದಾಖಲಾತಿ ಎಂದು ಉತ್ತರಿಸುತ್ತಾರೆ.

ನೀವೇನಾದರೂ ಈ ದಾವೆಯಲ್ಲಿ ನಿಮ್ಮ ತಂದೆ ಸಲ್ಲಿಸಿರುವ ತಕರಾರಿಗಿಂತ ಹೆಚ್ಚಿನ ತಕರಾರು ಸಲ್ಲಿಸಲು ಇಚ್ಚಿಸುತ್ತೀರಾ ಎಂದರೆ ಸಾಕ್ಷಿ ನನ್ನ ತಂದೆ ಸಲ್ಲಿಸಿರುವ ತಕರಾರನ್ನು ನಾನು ಎತ್ತಿ ಹಿಡಿದಿದ್ದೇನೆ ಎಂದು ಉತ್ತರಿಸುತ್ತಾರೆ. ನಾನು OS 29/2000 ಹಾಗೂ RFA 384/2002 ರ ಆದೇಶವನ್ನು ಈಗ ಓದಿ ತಿಳಿದುಕೊಂಡಿದ್ದೇನೆ ಮತ್ತು ವಕೀಲರಿಂದ ಕೇಳಿ

ತಿಳಿದುಕೊಂಡಿದ್ದೇನೆ. ಅಸಲು ದಾವಾ 100/1993 ದಾವೆ ವರ್ಗಾವಣೆ ಆಗಿ ಈ ನ್ಯಾಯಾಲಯಕ್ಕೆ ಬಂದ ನಂತರ ಅಸಲು ದಾವಾ 29/2000 ಆಗಿ ತೀರ್ಪು ಆಗಿದೆ ಎಂದರೆ ಸಾಕ್ಷಿ ಕೇಳಿ ತಿಳಿದುಕೊಳ್ಳುತ್ತೇನೆ ಎಂದು ಉತ್ತರಿಸುತ್ತಾರೆ.

**ವಿನಂತಿಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.